ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ

ಸಿದ್ದಾಪುರ

ಸಿ.ಸಿ. 596/2020

| | |
|---|---|
| ಸಿ.ಡಬ್ಲ್ಯೂ: | 8 |
| ಪಿ.ಡಬ್ಲ್ಯೂ: | 7 |

**ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕ: 05–06–2026**

**ಪಾಟೀಸವಾಲು ಃ ಆರೋಪಿತರ ಪರ ವಕೀಲರಿಂದ** ಶ್ರೀ ಆರ್ ಆರ್ ಹೆಚ್.

ದೇವೆಂದ್ರ ಗಣಪತಿ ನಾಯ್ಕ ರವರು ನನಗೆ ಪರಿಚಯ ಇರುತ್ತದೆ ಆದರೆ ಸಂಬಂಧಿಕರಲ್ಲ. ದೇವೆಂದ್ರ ಗಣಪತಿ ನಾಯ್ಕ ರವರ ಜಮೀನಿಂದ ನಮ್ಮ ಮನೆಗೆ 12 ಕಿ.ಮೀ ಅಂತರ ಇರುತ್ತದೆ. ಗಲಾಟೆ ನಡೆದ ದಿನದ ವಾರ ಯಾವುದೆಂದು ನನಗೆ ಗೊತ್ತಿಲ್ಲ.

ದಿಃ 16-07-2020 ರಂದು ನಾನು ಚಾಸಾ-1 ರವರ ಗದ್ದೆ ಕೆಲಸಕ್ಕೆ ಹೋಗಿರುತ್ತೇನೆ. ಆ ದಿನ ನಾನು, ಸುಧೀರ ಇಬ್ಬರು ಸೇರಿ ಹೋಗಿದ್ದೇವು. ಆ ದಿನ ಎಷ್ಟು ಕೆಲಸಕ್ಕೆ ಜನರು ಬಂದಿದ್ದರು ಎಂಬ ಪ್ರಶ್ನೆಗೆ ಸಾಕ್ಷಿಯು 6-7 ಜನ ಬಂದಿದ್ದರು ಎಂದು ನುಡಿಯುತ್ತಾರೆ. ಚಾಸಾ-1 ರವರ ಯಾವ ಸರ್ವೆ ನಂಬರನಲ್ಲಿ ನಾವು ಗದ್ದೆ ಕೆಲಸಕ್ಕೆ ಹೋಗಿದ್ದೇವು ಎಂದು ನನಗೆ ಗೊತ್ತಿಲ್ಲ. ಗಲಾಟೆ ಎಷ್ಟು ಆಗಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು 10-30 ಗಂಟೆಗೆ ಆಗಿರುತ್ತದೆ ಎಂದು ನುಡಿಯುತ್ತಾರೆ. ನೀವು ಎಷ್ಟು ಗಂಟೆಗೆ ಗದ್ದೆ ಬಳಿಯ ಹೋಗಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು 10-30 ಕ್ಕೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ನಿಮ್ಮ ಹೇಳಿಕೆಯಲ್ಲಿ " ಆ ಸಮಯದಲ್ಲಿ ಮಂಜುನಾಥ ಹಾಗೂ ಆತನ ಸಹೋದರರು ಗದ್ದೆಯ ದಾರಿಯ ವಿಷಯವಾಗಿ ನನ್ನೊಂದಿಗೆ ತಕರಾರು ಮಾಡಬಹುದು, ಆ ಕಾರಣದಿಂದ ತಾವುಗಳು ಬಂದು ಈ ಬಗ್ಗೆ ಸ್ವಲ್ಪ ಮಂಜುನಾಥನಿಗೆ ಹೇಳಿ ಬಗೆಹರಿಸಿಕೊಡುವಂತೆ ಕೇಳಿಕೊಂಡಂತೆ ನಾನು ಹಾಗೂ ನಮ್ಮ ಊರಿನ ಸುಧೀರ ನಾಯ್ಕ ಇವರು ಸೇರಿಕೊಂಡು ಕುರುವಂತೆಯ ದೇವೆಂದ್ರ ಇವರ ಗದ್ದೆಯ ಹತ್ತಿರ ಹೋಗಿದ್ದೇವು'' ಎಂದು ಹೇಳಿಕೆ ನೀಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮೇಲಿನ ಹೇಳಿಕೆ ನೀಡಿಲ್ಲ ಎಂದು ತಿಳಿಸಿದ್ದರಿಂದ ಸಾಕ್ಷಿಯ ಹೇಳಿಕೆಯನ್ನು ಆರೋಪಿತರ ಪರವಾಗಿ ನಿ.ಡಿ-3 ಎಂದು ಆದರಲ್ಲಿರುವ ಆಯ್ದು ಭಾಗವನ್ನು ನಿ.ಡಿ -3(ಎ) ಎಂದು ಗುರುತಿಸಲಾಯಿತು.

ಮುದ್ದೆ ಮಾಲು -1 ರಂತೆ ಇರುವ ನಾಲ್ಕು ಬಡಿಗೆಗಳನ್ನು ಸಾಕ್ಷಿಗೆ ತೋರಿಸಿ ಸದ್ರಿ ಬಡಿಗೆಗಳು ಆ ದಿನ ಯಾರ ಬಳಿ ಇದ್ದವು ಎನ್ನುವ ಪ್ರಶ್ನೆಗೆ ಸಾಕ್ಷಿಯು ಅನಂತ, ಮಂಜುನಾಥ, ಶಿವಾನಂದ, ಅಣ್ಣಪ್ಪ ರವರ ಕೈಯಲ್ಲಿ ಇತ್ತು ಎಂದು ನುಡಿಯುತ್ತಾರೆ. ಮೇಲಿನ ವ್ಯಕ್ತಿಗಳ ಕೈಯಲ್ಲಿ ಬಡಿಗೆ ಇತ್ತು ಎಂದು ನಾನು ಹೇಳಿಕೆ ಕೊಟ್ಟಿಲ್ಲ. ಗಲಾಟೆಯು ಅರಳು ಗದ್ದೆಯಲ್ಲಿ ಆಗಿರುತ್ತದೆ. ಬಡಿಗೆಗಳಿಗೆ ಕೇಸರು ಆಗಿತ್ತಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಕೇಸರು ಇತ್ತು ಎಂದು ನುಡಿಯುತ್ತಾರೆ. ಪ್ರಸ್ತುತ ನ್ಯಾಯಾಲಯದ ಮುಂದೆ ಇರುವ ಬಡಿಗೆಗಳಲ್ಲಿ ಕೇಸರು ಇರುವುದಿಲ್ಲ.

ನೀವೇನಾದರೂ ಗಲಾಟೆ ಬಿಡಿಸಿರುತ್ತೀರಾ ಎನ್ನುವ ಪ್ರಶ್ನೆಗೆ ಬಿಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನೀವು ಯಾರಿಂದ ಗಲಾಟೆ ಬಿಡಿಸಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಅನಂತ, ಶಿವಾನಂದ ಇವರೆಲ್ಲರೂ ಸೇರಿಕೊಂಡು ಚಾಸಾ- 1 ಮತ್ತು 4 ರವರುಗಳಿಗೆ ಹೊಡೆಯುತ್ತಿದ್ದು ಆಗ ನಾನು ಅವರ ಮಧ್ಯ ಹೋಗಿ ಹೊಡೆಯಬೇಡಿ ಎಂದು ಬಿಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಈ ರೀತಿ ಪೊಲೀಸರಿಗೆ ಹೇಳಿಕೆ ನೀಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನೆನಪಿಲ್ಲ ಎಂದು ನುಡಿಯುತ್ತಾರೆ.

ಗಲಾಟೆ ನಡೆಯಿತು ಎಂದು ಹೇಳುವ ಜಾಗದಲ್ಲಿ ಆರೋಪಿತರಿಗೆ ಯಾರು ಯಾರಿಗೆ ಗಾಯಗಳಾಗಿತ್ತು ಎಂದು ನಿಮಗೆ ಗೊತ್ತಿದೇಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಸಾಕ್ಷಿಗೆ ತೋರಿಸಿ ಇದರಲ್ಲಿ ಶಿವಾನಂದ ಯಾರು ಎನ್ನುವ ಪ್ರಶ್ನೆಗೆ ಸಾಕ್ಷಿಯು ಶಿವಾನಂದ ರವರನ್ನು ನೋಡಿ ಗುರುತಿಸಿರುತ್ತಾರೆ.

ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಸಾಕ್ಷಿಗೆ ತೋರಿಸಿ ಇದರಲ್ಲಿ ಆನಂತ ಯಾರು ಎನ್ನುವ ಪ್ರಶ್ನೆಗೆ ಸಾಕ್ಷಿಯು ಆನಂತ ರವರನ್ನು ನೋಡಿ ಗುರುತಿಸಿರುತ್ತಾರೆ.

ಉಳಿದ ಆರೋಪಿತರ ಹೇಸರು ಹೇಳಲು ಆಗುತ್ತಿದೆಯೋ ಎನ್ನುವ ಪ್ರಶ್ನೆಗೆ ಸಾಕ್ಷಿಯು ಕೃಷ್ಣ ರವರನ್ನು ನೋಡಿ ಗುರುತಿಸಿ ಅವರ ಹೆಸರು ಕೃಷ್ಣ ಎಂದು ಹೇಳಿರುತ್ತಾರೆ. ಉಳಿದವರ ಹೆಸರುಗಳು ನನಗೆ ಗೊತ್ತಿಲ್ಲ.

ಪೊಲೀಸರ ಮುಂದೆ ಎಷ್ಟು ಜನರ ಹೆಸರು ಹೇಳಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಶಿವಾನಂದ, ಕೃಷ್ಣ, ಅಣ್ಣಪ್ಪ, ಅನಂತ ಹಾಗೂ ಮಂಜುನಾಥ ರವರ ಹೆಸರುಗಳನ್ನು ಹೇಳಿರುತ್ತೇನೆಂದು ನುಡಿಯುತ್ತಾರೆ. ಆರೋಪಿತರನ್ನು ಆ ದಿನ ಮಾತ್ರ ನೋಡಿರುತ್ತೀರಾ ಅಥವಾ ಅದಕ್ಕೂ ಮೊದಲು ನೋಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಆ ದಿನ ಮಾತ್ರ ನೋಡಿರುತ್ತೇನೆ ಎಂದು ನುಡಿಯುತ್ತಾರೆ.

ಗಲಾಟೆಯು ಸುಮಾರು 1 ಗಂಟೆಯ ಮೇಲೆ ನಡೆದಿರುತ್ತದೆ. ನೀವೇನಾದರೂ ಯಾರನ್ನಾದರೂ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು

ನುಡಿಯುತ್ತಾರೆ. ದೇವೆಂದ್ರ ಹಾಗೂ ಗಜಾನನ ಇವರನ್ನು ಓಮಿನಿ ವಾಹನದಲ್ಲಿ ಸಿದ್ದಾಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಚಿಕಿತ್ಸೆ ಕೊಡಿಸಿರುತ್ತೇನೆಂದು ನುಡಿಯುತ್ತಾರೆ. ಸದ್ರಿ ಹೇಳಿಕೆಯನ್ನು ಆರೋಪಿತರ ಪರವಾರಿ ನಿ.ಡಿ-3 (ಬಿ) ಎಂದು ಗುರುತಿಸಲಾಯಿತು.

ಕತ್ತಿ ಯಾರ ಬಳಿ ಇತ್ತು ಎಂದು ಮಾಹಿತಿ ಇರುತ್ತದೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಕೃಷ್ಣ ರವರ ಬಳಿ ಇರುತ್ತದೆ ಎಂದು ನುಡಿಯುತ್ತಾರೆ. ದೇವೆಂದ್ರ, ಅವರ ತಮ್ಮ ಹಾಗೂ ಆರೋಪಿತರ ನಡುವೆ ಎನು ಮಾತು ಕತೆ ಆಗಿರುತ್ತದೆ ಎಂದು ನಿಮಗೆ ಗೊತ್ತಿರುತ್ತದೇಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಆರೋಪಿತರು ಏಕಾಏಕಿ ಬಂದು ಅವಾಚ್ಯ ಶಬ್ದಗಳಿಂದ ಬೈದು ಹಲ್ಲೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ನಿಮ್ಮ ಮೇಲೆ ಒಂದು ಪ್ರಕರಣ ಏಕೆ ದಾಖಲಾಗಿರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಜಗಳ ಬಿಡಿಸಲು ಹೊದ ಕಾರಣ ನನ್ನ ಮೇಲೆ ಪ್ರಕರಣ ದಾಖಲಾಗಿರುತ್ತದೆ ಎಂದು ನುಡಿಯುತ್ತಾರೆ.

ನೀವು, ದೇವೆಂದ್ರ, ಸುಧೀರ ರವರಗಳು ಆರೋಪಿತರ ವಿರುದ್ಧ ಜಗಳ ಮಾಡುವ ಉದ್ದೇಶದಿಂದ ಸ್ಥಳಕ್ಕೆ ಬಂದು ಹಲ್ಲೆ ಮಾಡಿರುವ ಕಾರಣ ನಿಮ್ಮ ಮೇಲೆ ಪ್ರಕರಣ ದಾಖಲಾಗಿರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ದೇವೆಂದ್ರ ರವರಿಗೆ ಸ್ಥಳೀಯ ಸ್ಥಳದಲ್ಲಿ ಆಳುಗಳು ಸಿಗುತ್ತಾರೆಯೇ ಅಥವಾ ಇಲ್ಲವೇ ಎನ್ನುವ ಪ್ರಶ್ನೆಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಾನು ಆ ದಿನ ದೇವೆಂದ್ರ ರವರಿಗೆ ರಸ್ತೆ ಬಿಡಿಸಿಕೊಡುವ ಸಲುವಾಗಿ ಅವರ ಸಹಾಯಕ್ಕೆಂದೇ ಅಲ್ಲಿಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿಯೇ ದೇವೆಂದ್ರ ರವರು ನನ್ನನ್ನು ಕೊಂಡ್ಲಿ ಗ್ರಾಮದಿಂದ ಅವರ ಗದ್ದೆಗೆ ಕರೆಯಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ದಿನ ನಾನು ಹಾಗೂ ಸುಧೀರ ರವರು ದೇವೆಂದ್ರ ರ ಗದ್ದೆಗೆ ಕೆಲಸಕ್ಕೆ ಹೋಗಿರುವ ವಿಚಾರ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ಅನಂತ, ಶಿವಾನಂದ, ಅಣ್ಣಪ್ಪ ಹಾಗೂ ಮಂಜುನಾಥ ರವರಗಳು ದೊಣ್ಣೆಯಿಂದ ಹೊಡೆದರು ಎಂದು ಹೇಳುವ ವಿಚಾರ ಹಾಗೂ ಕೃಷ್ಣ ರವರು ಕತ್ತಿಯಿಂದ ಹಲ್ಲೆ ಮಾಡಿದರು ಎನ್ನುವ ವಿಚಾರ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ.

ನಾವುಗಳೇ ಮಂಜುನಾಥ, ಶಿವಾನಂದ ಗಳಿಗೆ ಹಲ್ಲೆ ಮಾಡಿದ್ದು ಇದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ದೇವೆಂದ್ರ ರವರು ಸುಳ್ಳು ದೂರನ್ನು ನೀಡಿದ್ದು ಇದಕ್ಕೆ ಪೂರಕವಾಗಿ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಸ.ಒ

ಸಹಿ ಇದೆ.
ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಸಿದ್ದಾಪುರ